ವಿಷಯ :- ರೇಷ್ಮೆ ನೂಲುವವರಿಗೆ ಸಾಮೂಹಿಕ ವಿಮಾ ಯೋಜನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 839 (1630)

ಶ್ರೀ ಯು. ಆರ್. ಸಭಾಪತಿ (ಉಡುಪಿ) :- ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 1994 ರ ಜುಲೈ ತಿಂಗಳಲ್ಲಿ ಹಿಂದಿನ ಮುಖ್ಯ ಮಂತ್ರಿಗಳು ರೇಷ್ಮೆ ನೂಲುವವರಿಗೆ ಸಾಮೂಹಿಕ ವಿಮಾ ಸೌಲಭ್ಯ ಘೋಷಣೆ ಮಾಡಿರುವುದು ನಿಜವೇ? ಈ ವಿಮಾ ಸೌಲಭ್ಯ ಈಗ ಜಾರಿಯಲ್ಲಿ ಇದೆಯೇ?

ಆ) ಎಷ್ಟು ಮಂದಿ ಫಲಾನುಭವಿಗಳು ಈ ಯೋಜನೆಯಡಿಯಲ್ಲಿ ನೊಂದಾಯಿ ಸಲ್ಪಟ್ಟಿದ್ದಾರೆ.

ಇ) ಎಷ್ಟು ಕುಟುಂಬಗಳಿಗೆ ಇದರಿಂದ ಪ್ರಯೋಜನ ಲಭಿಸಿದೆ (ವಿವರ ನೀಡುವುದು)

ಈ) ಈ ಯೋಜನೆ ಜಾರಿಯಲ್ಲಿ ಇಲ್ಲದಿದ್ದರೆ ಯಾವಾಗ ಜಾರಿಗೆ ತರಲಾಗುವುದು.

ಶ್ರೀ ಎಂ. ವರದೇಗೌಡ (ರೇಷ್ಮೆ ರಾಜ್ಯ ಸಚಿವರು) :-

ಅ) ಹೌದು. ಜಾರಿಯಲ್ಲಿ ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಹಣಕಾಸಿನ ಲಭ್ಯತೆ ಈ ಯೋಜನೆ ಅನುಷ್ಠಾನದಿಂದ ರಾಜ್ಯದ ಇತರೆ ಅಸಂಘಟಿತ ಕಾರ್ಮಿಕ ವರ್ಗ ಸಮುದಾಯಗಳ ಮೇಲೆ ಆಗುವ ಪರಿಣಾಮ ಇವುಗಳನ್ನು ಆಧರಿಸಿ ತೀರ್ಮಾನ ಕೈಗೊಳ್ಳಲಾಗುವುದು.

ವಿಷಯ :- ಕೈಮಗ್ಗ ನೇಕಾರರಿಗೆ ಘೋಷಿಸಿರುವ "ವೃದ್ಧಾಪ್ಯ ಮಿತ್ರ" ಪಿಂಚಣಿ ಯೋಜನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 841 (1631)

ಶ್ರೀ ಯು. ಆರ್. ಸಭಾಪತಿ (ಉಡುಪಿ) :- ಮಾನ್ಯ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 1994-95 ರಲ್ಲಿ ಹಿಂದಿನ ಮುಖ್ಯಮಂತ್ರಿಗಳು ಕೈಮಗ್ಗ ನೇಕಾರರಿಗೆ ಘೋಷಿಸಿರುವ "ವೃದ್ಧಾಪ್ಯ" ಮಿತ್ರ ಪಿಂಚಣಿ ಯೋಜನೆಯನ್ನು ಜಾರಿಗೆ ತರುವ ವಿಚಾರವು ಸರ್ಕಾರದವರ ಪರಿಶೀಲನೆಯಲ್ಲಿದೆಯೇ?